# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2629 |
| 2 | ಸದಸ್ಯರ ಹೆಸರು | : | ಶ್ರೀ ಪಿ.ಆರ್. ರಮೇಶ್ (ನಾಮ ನಿರ್ದೇಶನ ಹೊಂದಿದವರು) |
| 3 | ಉತ್ತರಿಸುವ ದಿನಾಂಕ | : | 24-03-2022 |
| 4 | ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಇರುವ ಸಂಚಾರಿ ಆರಕ್ಷಕರ ಠಾಣೆಗಳಲ್ಲಿ ಮಂಜೂರಾಗಿರುವ ಹುದ್ದೆಗಳ ಒಟ್ಟು ಸಂಖ್ಯೆ ಎಷ್ಟು ಮತ್ತು ಪ್ರಸ್ತುತ ಭರ್ತಿಯಾಗದೇ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; (ವಿವರ ನೀಡುವುದು) | ಬೆಂಗಳೂರು ನಗರ ಸಂಚಾರ ವಿಭಾಗದಲ್ಲಿ ಒಟ್ಟು 44 ಸಂಚಾರ ಪೊಲೀಸ್ ಠಾಣೆಗಳಿದ್ದು ಠಾಣಾವಾರು ಮಂಜೂರಾಗಿರುವ ಹುದ್ದೆಗಳು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಮತ್ತು ಖಾಲಿ ಇರುವ ಹುದ್ದೆಗಳ ವಿವರಗಳನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ. |
| ಆ) | ಬೆಂಗಳೂರು ನಗರದಲ್ಲಿ ಅತಿ ದಟ್ಟಣೆಯ ಮತ್ತು ಇತರೆ ಮುಖ್ಯ ರಸ್ತೆಗಳಲ್ಲಿ ಸಂಚಾರ ವಾಹನ ದಟ್ಟಣೆಯನ್ನು ನಿವಾರಿಸುವ ಜವಾಬ್ದಾರಿ ಸಂಚಾರ ಆರಕ್ಷಕರ ಕರ್ತವ್ಯವಾಗಿದೆಯೇ; | ಹೌದು. |
| ಇ) | ಹಾಗಿದ್ದಲ್ಲಿ, ನಗರದ ಬಹಳಷ್ಟು ಕಡೆ ಅತಿ ಸಂಚಾರ ದಟ್ಟಣೆಯ ಸಮಯದಲ್ಲಿ ಸಂಚಾರಿ ಆರಕ್ಷಕರು ಸದರಿ ರಸ್ತೆಗಳಲ್ಲಿ ಇಲ್ಲದೆ ಇರುವುದು ಗಮನಕ್ಕೆ ಬಂದಿದೆಯೇ; | ಬಂದಿರುತ್ತದೆ. |
| ಈ) | ಬಂದಿದ್ದಲ್ಲಿ, ವೈಜ್ಞಾನಿಕ ವ್ಯವಸ್ಥೆಯನ್ನು (Scientific System) ಅಳವಡಿಸಿಕೊಂಡು ಸಂಚಾರ ಆರಕ್ಷಕರು ರಸ್ತೆ ಸಂಚಾರದ ದಟ್ಟಣೆಯನ್ನು ಸಮರ್ಥ ರೀತಿಯಲ್ಲಿ ನಿಭಾಯಿಸಲು ಸುಲಭವಾಗುವ ವಿಷಯದ ಕುರಿತು ಸರ್ಕಾರ ಚಿಂತಿಸಿದೆಯೇ? (ವಿವರ ನೀಡುವುದು) | ಚಿಂತಿಸಲಾಗಿದ್ದು, ವಿವರಗಳನ್ನು **ಅನುಬಂಧ-2** ರಲ್ಲಿ ಲಗತ್ತಿಸಿದೆ. |

ಸಂಖ್ಯೆ: ಒಇ 64 ಪಿಇಎಂ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು

ಅನುಬಂಧ-1

STATION WISE SANCTIONED, ACTUAL AND VACANCY POSITION AS ON 19/03/2022

| SL/NO | TRAFFIC P.S | SANTIONED | | | | | | ACTUAL | | | | | | VACANCY | | | | | |
|---|---|---|---|---|---|---|---|---|---|---|---|---|---|---|---|---|---|---|---|
| | | PI | PSI | ASI | HC | PC | TOTAL | PI | PSI | ASI | HC | PC | TOTAL | PI | PSI | ASI | HC | PC | TOTAL |
| 1 | CUBBON PARK TR | 1 | 12 | 13 | 41 | 80 | **147** | 1 | 9 | 12 | 41 | 79 | **142** | | 3 | 1 | | 1 | **5** |
| 2 | SADASHIVANAGAR TR | 1 | 8 | 12 | 40 | 81 | **142** | 1 | 4 | 12 | 40 | 81 | **138** | | 4 | | | | **4** |
| 3 | HIGH GROUNDS TR | 1 | 8 | 12 | 40 | 88 | **149** | 1 | 5 | 12 | 39 | 87 | **144** | | 3 | | 1 | 1 | **5** |
| 4 | HALSOORGATE TR | 1 | 9 | 12 | 35 | 85 | **142** | 1 | 6 | 12 | 35 | 84 | **138** | | 3 | | | 1 | **4** |
| 5 | ASHOKNAGAR TR | 1 | 10 | 12 | 45 | 80 | **148** | 1 | 7 | 12 | 45 | 78 | **143** | | 3 | | | 2 | **5** |
| 6 | WILSONGARDEN TR | 1 | 7 | 10 | 40 | 65 | **123** | 1 | 5 | 10 | 40 | 64 | **120** | | 2 | | | 1 | **3** |
| 7 | HALASOOR TR | 1 | 9 | 12 | 40 | 66 | **128** | 1 | 4 | 12 | 40 | 66 | **123** | | 5 | | | | **5** |
| 8 | INDIRANAGAR TR | 1 | 8 | 10 | 40 | 65 | **124** | 1 | 4 | 10 | 40 | 64 | **119** | | 4 | | | 1 | **5** |
| 9 | PULAKESHINAGAR TR | 1 | 8 | 10 | 40 | 65 | **124** | 1 | 4 | 9 | 38 | 64 | **116** | | 4 | 1 | 2 | 1 | **8** |
| 10 | BANASAWADI TR | 1 | 6 | 11 | 30 | 68 | **116** | 1 | 5 | 10 | 30 | 67 | **113** | | 1 | 1 | | 1 | **3** |
| 11 | SHIVAJINAGAR TR | 1 | 8 | 11 | 40 | 68 | **128** | 1 | 5 | 11 | 38 | 67 | **122** | | 3 | | 2 | 1 | **6** |
| 12 | K.G. HALLI TR. | 1 | 3 | 8 | 43 | 89 | **144** | 1 | 2 | 7 | 42 | 83 | **135** | | 1 | 1 | 1 | 6 | **9** |
| 13 | ADUGODI TR | 1 | 7 | 11 | 40 | 65 | **124** | 1 | 3 | 11 | 40 | 65 | **120** | | 4 | | | | **4** |
| 14 | MADIWALA TR | 1 | 7 | 10 | 40 | 75 | **133** | 1 | 3 | 10 | 40 | 73 | **127** | | 4 | | | 2 | **6** |
| 15 | MICO LAYOUT TR | 1 | 8 | 11 | 35 | 63 | **118** | 1 | 4 | 9 | 35 | 63 | **112** | | 4 | 2 | | | **6** |
| 16 | ELECTRONICI CITY TR | 1 | 6 | 12 | 30 | 60 | **109** | 1 | 5 | 12 | 30 | 59 | **107** | | 1 | | | 1 | **2** |
| 17 | HULIMAVU TR | 1 | 3 | 8 | 35 | 75 | **122** | 1 | 2 | 8 | 35 | 72 | **118** | | 1 | | | 3 | **4** |
| 18 | HSR LAYOUT TR | 1 | 2 | 8 | 38 | 75 | **124** | 1 | 2 | 7 | 37 | 74 | **121** | | | 1 | 1 | 1 | **3** |
| 19 | K R PURAM TR | 1 | 7 | 11 | 35 | 68 | **122** | 1 | 4 | 11 | 34 | 68 | **118** | | 3 | | 1 | | **4** |
| 20 | AIRPORT TR | 1 | 9 | 11 | 36 | 65 | **122** | 1 | 4 | 11 | 36 | 65 | **117** | | 5 | | | | **5** |
| 21 | WHITE FIELD TR | 1 | 7 | 11 | 38 | 70 | **127** | 1 | 4 | 11 | 38 | 70 | **124** | | 3 | | | | **3** |
| 22 | UPPARPET TR | 1 | 6 | 9 | 28 | 65 | **109** | 1 | 3 | 9 | 28 | 65 | **106** | | 3 | | | | **3** |
| 23 | CHICKPET TR | 1 | 6 | 9 | 28 | 68 | **112** | 1 | 2 | 9 | 28 | 67 | **107** | | 4 | | | 1 | **5** |
| 24 | CITY MARKET TR | 1 | 7 | 8 | 26 | 55 | **97** | 1 | 5 | 8 | 26 | 54 | **94** | | 2 | | | 1 | **3** |
| 25 | MAGADI ROAD TR | 1 | 6 | 8 | 27 | 57 | **99** | 1 | 3 | 8 | 26 | 57 | **95** | | 3 | | 1 | | **4** |
| 26 | VIJAYANAGAR TR | 1 | 8 | 9 | 27 | 67 | **112** | 1 | 4 | 9 | 27 | 67 | **108** | | 4 | | | | **4** |
| 27 | BYATARAYANAPUR TR | 1 | 8 | 9 | 28 | 75 | **121** | 1 | 7 | 9 | 28 | 72 | **117** | | 1 | | | 3 | **4** |
| 28 | KAMAKSHIPALYA TR | 1 | 6 | 8 | 25 | 55 | **95** | 1 | 3 | 8 | 24 | 55 | **91** | | 3 | | 1 | | **4** |
| 29 | KENGERI TR | 1 | 5 | 6 | 22 | 54 | **88** | 1 | 3 | 6 | 21 | 53 | **84** | | 2 | | 1 | 1 | **4** |
| 30 | MALLESHWARAM TR | 1 | 9 | 10 | 25 | 55 | **100** | 1 | 3 | 10 | 25 | 53 | **92** | | 6 | | | 2 | **8** |
| 31 | RAJAJINAGAR TR | 1 | 7 | 10 | 25 | 46 | **89** | 1 | 2 | 10 | 24 | 45 | **82** | | 5 | | 1 | 1 | **7** |
| 32 | YESHWANTHAPUR TR | 1 | 8 | 10 | 28 | 55 | **102** | 1 | 3 | 9 | 28 | 54 | **95** | | 5 | 1 | | 1 | **7** |
| 33 | PEENYA TR | 1 | 8 | 10 | 28 | 55 | **102** | 1 | 5 | 10 | 26 | 53 | **95** | | 3 | | 2 | 2 | **7** |
| 34 | JALAHALLI TR | 1 | 2 | 10 | 20 | 54 | **87** | 1 | 1 | 10 | 20 | 54 | **86** | | 1 | | | | **1** |
| 35 | CHAMARAJPET TR | 1 | 8 | 9 | 28 | 65 | **111** | 1 | 5 | 9 | 28 | 64 | **107** | | 3 | | | 1 | **4** |
| 36 | BASAVANAGUDI TR | 1 | 8 | 9 | 25 | 54 | **97** | 1 | 3 | 9 | 24 | 53 | **90** | | 5 | | 1 | 1 | **7** |
| 37 | JAYANAGAR TR | 1 | 8 | 8 | 28 | 65 | **110** | 1 | 3 | 7 | 28 | 65 | **104** | | 5 | 1 | | | **6** |
| 38 | BANASHANKARI TR | 1 | 7 | 9 | 28 | 68 | **113** | 1 | 2 | 9 | 26 | 68 | **106** | | 5 | | 2 | | **7** |
| 39 | K.S. LAYOUT TR | 1 | 6 | 8 | 23 | 51 | **89** | 1 | 1 | 8 | 23 | 51 | **84** | | 5 | | | | **5** |
| 40 | R.T. NAGAR TR | 1 | 9 | 10 | 28 | 55 | **103** | | 6 | 10 | 28 | 53 | **97** | 1 | 3 | | | 2 | **6** |
| 41 | HEBBALA TR | 1 | 5 | 10 | 24 | 54 | **94** | 1 | 3 | 10 | 23 | 52 | **89** | | 2 | | 1 | 2 | **5** |
| 42 | YELAHANKA TR | 1 | 9 | 9 | 25 | 57 | **101** | 1 | 7 | 9 | 24 | 57 | **98** | | 2 | | 1 | | **3** |
| 43 | CHICKKAJALA TR | 1 | 6 | 8 | 20 | 55 | **90** | 1 | 3 | 8 | 19 | 54 | **85** | | 3 | | 1 | 1 | **5** |
| 44 | INT. AIRPORT TR | 1 | 7 | 8 | 20 | 55 | **91** | 1 | 2 | 8 | 19 | 54 | **84** | | 5 | | 1 | 1 | **7** |
| | GRAND TOTAL | **44** | **311** | **430** | **1387** | **2856** | **5028** | **43** | **170** | **421** | **1366** | **2813** | **4813** | **1** | **141** | **9** | **21** | **43** | **215** |

## ಅನುಬಂಧ-2

**ಈ) ವೈಜ್ಞಾನಿಕ ವ್ಯವಸ್ಥೆಯನ್ನು (Scientific System) ಅಳವಡಿಸಿಕೊಂಡು ಸಂಚಾರ ಆರಕ್ಷಕರು ರಸ್ತೆ ಸಂಚಾರದ ದಟ್ಟಣೆಯನ್ನು ಸಮರ್ಥ ರೀತಿಯಲ್ಲಿ ನಿಭಾಯಿಸಲು ಸುಲಭವಾಗುವ ವಿಷಯದ ಕುರಿತು ಸರ್ಕಾರ ಚಿಂತಿಸಿದೆಯೇ ? (ವಿವರ ನೀಡುವುದು)**

ಸಂಚಾರ ದಟ್ಟಣೆಯನ್ನು ಸಮರ್ಥ ರೀತಿಯಲ್ಲಿ ನಿಭಾಯಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. **ಸಿಗ್ನಲ್ ದೀಪಗಳು:** ನಗರದಲ್ಲಿ ಪ್ರಮುಖ ವೃತ್ತ/ಸ್ಥಳಗಳನ್ನು ಗುರುತಿಸಿ ಅಗತ್ಯವಿರುವ ಒಟ್ಟು 388 ಸ್ಥಳಗಳಲ್ಲಿ ಸಂಚಾರ ಸಿಗ್ನಲ್ ದೀಪಗಳ ಅಳವಡಿಕೆ. 35 ಸ್ಥಳಗಳಲ್ಲಿ ಅಡಾಪ್ಟೀವ್ ಸಿಗ್ನಲ್‌ಗಳನ್ನು ಅಳವಡಿಸಲಾಗಿದೆ.
2. **ಕ್ಯಾಮೆರಾ:** ಒಟ್ಟು 1100 ಸಂಚಾರ ಕಣ್ಗಾವಲು ಕ್ಯಾಮೆರಾಗಳ ಅಳವಡಿಕೆ.
3. **ಟ್ರಾಫಿಕ್ ವಾರ್ಡನ್:** 800ಕ್ಕೂ ಹೆಚ್ಚು ಸ್ವಯಂ ಇಚ್ಛೆಯಿಂದ ಟ್ರಾಫಿಕ್ ವಾರ್ಡನ್‌ಗಳಾಗಿ ಸೇವೆ ಸಲ್ಲಿಸಲು ಮುಂದೆ ಬಂದಿರುವ ಯುವಕರ ನೇಮಕಾತಿ ಪ್ರಕ್ರಿಯೆ.
4. **ಸ್ಥಳಾಂತರ:** ಸಂಚಾರಕ್ಕೆ ಅಡ್ಡಿ ಉಂಟು ಮಾಡುತ್ತಿದ್ದ ಎಲೆಕ್ಟ್ರಿಕ್ ಪೋಲ್‌ಗಳು ಮತ್ತು ಟ್ರಾನ್ಸ್‌ಫಾರ್ಮರ್‌ಗಳ ಸ್ಥಳಾಂತರ.
5. **ಪರಿಣಾಮಕಾರಿ ಆಂದೋಲನಗಳು:**
   - ✓ ಮದ್ಯಪಾನ ಮಾಡಿ ವಾಹನ ಚಾಲನೆ ವಿರುದ್ಧ ಅರಿವು.
   - ✓ ಹೆಲ್ಮೆಟ್‌ರಹಿತ ದ್ವಿ ಚಕ್ರ ವಾಹನ ಸವಾರಿ ವಿರುದ್ಧ ಅರಿವು.
   - ✓ ಮೊಬೈಲ್ ಫೋನ್ ಬಳಕೆ ವಿರುದ್ಧ ಅರಿವು.
   - ✓ ಪಥ ಶಿಸ್ತು ಜಾರಿ ಆಂದೋಲನ.
   - ✓ ಅಂಬುಲೆನ್ಸ್‌ಗಳಿಗೆ ಮೊದಲ ಆದ್ಯತೆ ಆಂದೋಲನ.
   - ✓ ವಿನೂತನ 'ಪಬ್ಲಿಕ್ ಐ' ಆಂದೋಲನ.
   - ✓ ಕಡ್ಡಾಯ ಆಸನ ಪಟ್ಟಿಗಳ ಧರಿಸುವಿಕೆ.
   - ✓ ಆಟೋ ಚಾಲಕರಿಂದ ದುಬಾರಿ ಬಾಡಿಗೆ ಹಾಗೂ ಕರೆದ ಕಡೆ ಬರಲು ನಿರಾಕರಣೆಯ ವಿರುದ್ಧ ವಿಶೇಷ ಕಾರ್ಯಾಚರಣೆ.
6. **ಏಕಮುಖ ಸಂಚಾರ:** ಅಧಿಸೂಚನೆ ಹೊರಡಿಸಿ 390 ರಸ್ತೆಗಳಲ್ಲಿ ಏಕಮುಖ ಸಂಚಾರ ರಸ್ತೆಗಳನ್ನಾಗಿ ಘೋಷಿಸಲಾಗಿದೆ.
7. **ಝೀರೋ ಟಾಲರೆನ್ಸ್:** 107 ಪ್ರಮುಖ ರಸ್ತೆಗಳು ಮತ್ತು 44 ಕೂಡುತಾಣ ಜಂಕ್ಷನ್‌ಗಳನ್ನು ಗುರುತಿಸಿ 'ಝೀರೋ ಟಾಲರೆನ್ಸ್' ಯೋಜನೆಯಡಿ ಕಟ್ಟುನಿಟ್ಟಾಗಿ ಸಂಚಾರ ನಿಯಮಗಳನ್ನು ಜಾರಿ ಮಾಡಲಾಗುತ್ತಿದೆ.
8. **ಆಧುನೀಕರಣ:**
   - ✓ ನಗರದಾದ್ಯಂತ ಅತ್ಯಾಧುನಿಕ ತಂತ್ರಜ್ಞಾನ ಬಳಕೆ ಮಾಡಿಕೊಂಡು ಅಡಾಪ್ಟೀವ್ ಸಿಗ್ನಲ್‌ಗಳ ಅಳವಡಿಕೆಯಿಂದ ರಸ್ತೆಗಳಲ್ಲಿ ಪ್ರಯಾಣದ ಅವಧಿಯಲ್ಲಿ ಕಡಿತ.
   - ✓ ನಿಯಮಜಾರಿ ವೇಳೆ ಅತ್ಯಾಧುನಿಕ ಉಪಕರಣಗಳಾದ ಬಾಡಿವೋರ್ನ್ ಕ್ಯಾಮೆರಾಗಳು. ಆಲ್ಕೋಮೀಟರ್‌ಗಳು, ಪಿ.ಡಿ.ಎ ಪಿ.ಓ.ಎಸ್ ಉಪಕರಣ ಮತ್ತು ಇಂಟರ್‌ಸೆಪ್ಟರ್ ವಾಹನಗಳ ಬಳಕೆ
   - ✓ ಪ್ರಮುಖ 10 ಜಂಕ್ಷನ್‌ಗಳಲ್ಲಿ ರೆಡ್‌ಲೈಟ್ ವಯಲೇಷನ್ ಡಿಟೆಕ್ಷನ್ ಕ್ಯಾಮೆರಾಗಳ ಅಳವಡಿಕೆ.
   - ✓ ಫೀಲ್ಡ್ ಟ್ರಾಫಿಕ್ ವಯಲೇಷನ್‌ಗಳನ್ನು ದಾಖಲಿಸಲು ಆಧುನಿಕ ಆಂಡ್ರಾಯ್ಡ್‌ಗಳ ಬಳಕೆ.

✓ ಸಂಚಾರ ನಿಯಮಗಳ ಸಂಪರ್ಕರಹಿತ ಪರಿಣಾಮಕಾರಿ ಜಾರಿ ಪ್ರಕ್ರಿಯೆ.

9. **ರಸ್ತೆ ಉಬ್ಬುಗಳು:** ನಗರದ ವಿವಿಧ ರಸ್ತೆಗಳಲ್ಲಿ ಅವೈಜ್ಞಾನಿಕವಾಗಿ ನಿರ್ಮಿಸಿದ್ದ ರಸ್ತೆ ಉಬ್ಬುಗಳನ್ನು ತೆರವುಗೊಳಿಸುವಿಕೆ, ವೈಜ್ಞಾನಿಕ ರಸ್ತೆ ಉಬ್ಬುಗಳನ್ನು ನಿರ್ಮಿಸಲು ಸ್ಥಳ ಗುರುತಿಸುವಿಕೆ.

10. **ನಾಗರೀಕರ ಪರಿಣಾಮಕಾರಿ ಸಹಭಾಗಿತ್ವ:-**
   - ✓ ಟ್ರಾಫಿಕ್ ವಾರ್ಡನ್
   - ✓ ಸ್ಟೂಡೆಂಟ್ಸ್ ಅಸೋಸಿಯೇಷನ್ ಫಾರ್ ರೋಡ್ ಸೇಫ್ಟಿ
   - ✓ ಸ್ಥಳೀಯ ಸಂಚಾರ ನಿರ್ವಹಣಾ ಸಮಿತಿ
   - ✓ ವೃತ್ತಿಪರ ಚಾಲಕರುಗಳಿಗೆ ರಸ್ತೆ ಸುರಕ್ಷತೆ ಬಗ್ಗೆ ತರಬೇತಿ ಕಾರ್ಯಕ್ರಮಗಳು
   - ✓ ಸಂಚಾರ ಬೀಟ್ ವ್ಯವಸ್ಥೆ
   - ✓ ಮಹಿಳೆಯರ ಸುರಕ್ಷತೆಗೆ ಪ್ರಾಮುಖ್ಯತೆ ಹಾಗೂ ಸುರಕ್ಷಾ ಆ್ಯಪ್ ಬಳಕೆ ಬಗ್ಗೆ ಅರಿವು ಮೂಡಿಸುವುದು.

11. **ಕ್ರಿಯಾ ಯೋಜನೆ:** ಸಿ.ಬಿ.ಡಿ. ಕ್ಷೇತ್ರದ ವಿಸ್ತರಿಸುವಿಕೆ ಮತ್ತು ಸಂಚಾರ ಕ್ರಿಯಾ ಯೋಜನೆ.

12. **ಹೈಡೆನ್ಸಿಟಿ ಕಾರಿಡಾರುಗಳು:** ಹೈಡೆನ್ಸಿಟಿ ಕಾರಿಡಾರ್‌ಗಳ ಗುರ್ತಿಸುವಿಕೆ ಮತ್ತು ಅಭಿವೃದ್ಧಿ ಯೋಜನೆ.

13. **ವಾಹನಗಳ ತೆರವು:** ರಸ್ತೆಯಲ್ಲಿ ವಾರಸುದಾರರಿಲ್ಲದೆ ಸಂಚಾರಕ್ಕೆ ಅಡ್ಡಿ ಉಂಟು ಮಾಡುತ್ತಿದ್ದ ವಾಹನಗಳನ್ನು ತೆರವುಗೊಳಿಸುವ ಕಾರ್ಯಾಚರಣೆ

14. **ವಿದ್ಯಾರ್ಥಿಗಳಿಗೆ ರಸ್ತೆ ಸುರಕ್ಷತೆ ತರಬೇತಿ:** ಎಸ್.ಎ.ಆರ್.ಎಸ್ ಯೋಜನೆ ಅಡಿಯಲ್ಲಿ ಲಕ್ಷಾಂತರ ವಿದ್ಯಾರ್ಥಿಗಳಿಗೆ ರಸ್ತೆ ಸುರಕ್ಷತೆ ಬಗ್ಗೆ ಅರಿವು ಮೂಡಿಸುವಿಕೆ.

15. ಬೆಂಗಳೂರು ನಗರದ ರಸ್ತೆಗಳಲ್ಲಿ ಭಾರೀ ಸರಕು ಸಾಗಣೆ ವಾಹನಗಳಿಂದ ಸಂಚಾರ ಸಮಸ್ಯೆಗಳು ಕಂಡುಬಂದಿದ್ದ ಕಾರಣ ಬೆಂಗಳೂರು ನಗರದ ಪೊಲೀಸ್ ಆಯುಕ್ತರ ಸರಹದ್ದಿಗೆ ಒಳಪಡುವ ಎಲ್ಲಾ ರಸ್ತೆಗಳಲ್ಲಿಯೂ ಸರಕು ಸಾಗಣೆ ವಾಹನಗಳು ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 04.00 ಗಂಟೆಯವರೆಗೆ ಹಾಗೂ ರಾತ್ರಿ 10.00 ಗಂಟೆಯಿಂದ ಬೆಳಿಗ್ಗೆ 07.00 ಗಂಟೆಯವರೆಗೆ ಸಂಚರಿಸುವಂತೆ ಹಾಗೂ ಬೆಳಿಗ್ಗೆ 07.00 ಗಂಟೆಯಿಂದ 11.00 ಗಂಟೆಯವರೆಗೆ ಹಾಗೂ ಸಂಜೆ 04.00 ಗಂಟೆಯಿಂದ ರಾತ್ರಿ 10.00 ಗಂಟೆಯವರೆಗೆ ಪೊಲೀಸ್ ಆಯುಕ್ತರ ಸರಹದ್ದಿಗೆ ಒಳಪಡುವ ಎಲ್ಲಾ ರಸ್ತೆಗಳಲ್ಲಿಯೂ ಸರಕು ಸಾಗಣೆ ವಾಹನಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ.

16. ಪ್ರತಿಯೊಂದು ಸಂಚಾರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಒಂದೊಂದು ಪ್ರಮುಖ ರಸ್ತೆಗಳನ್ನು ಗುರುತಿಸಿ ಮಾದರಿ ರಸ್ತೆಯನ್ನಾಗಿ ಅಳವಡಿಸಿಕೊಳ್ಳಲಾಗಿದೆ ಮತ್ತು ಇಂತಹ ಮಾದರಿ ರಸ್ತೆಗಳಲ್ಲಿ ಯಾವುದೇ ರೀತಿಯ ಸಂಚಾರ ಸಮಸ್ಯೆಗಳು ಸಂಭವಿಸದಂತೆ ಹಾಗೂ ರಸ್ತೆ ಸುರಕ್ಷತೆ ಕಟ್ಟುನಿಟ್ಟಾಗಿ ಜಾರಿ ಮಾಡಲಾಗಿದೆ.

17. ಪ್ರತಿ ಸಂಚಾರ ಪೊಲೀಸ್ ಠಾಣಾ ಮಟ್ಟದಲ್ಲಿ ಪ್ರತಿ ತಿಂಗಳ 3ನೇ ಶನಿವಾರಗಳಂದು ನಾಗರೀಕ ಸಂಚಾರ ವೇದಿಕೆ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದ್ದು, ಆಯಾ ಸಂಚಾರ ಠಾಣಾ ವ್ಯಾಪ್ತಿಯ ನಾಗರೀಕರು ತಮ್ಮ ಸಂಚಾರ ಸಮಸ್ಯೆಗಳನ್ನು ಠಾಣಾ ಮಟ್ಟದಲ್ಲಿ ಪರಿಹರಿಸಿಕೊಳ್ಳುವ ವೇದಿಕೆಯನ್ನು ಸೃಜಿಸಲಾಗಿದೆ.

18. ಸಂಚಾರ ನಿರ್ವಹಣಾ ಕೇಂದ್ರವು (ಟಿ.ಎಂ.ಸಿ) ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಬೆಂಗಳೂರು ನಗರದಾದ್ಯಂತ ಅಳವಡಿಸಲಾಗಿರುವ 270 ಕಣ್ಗಾವಲು ಕ್ಯಾಮರಾದ ಮೂಲಕ ಟಿ.ಎಂ.ಸಿ.ಯಲ್ಲಿ ಅಳವಡಿಸಲಾಗಿರುವ ವಿಡಿಯೋ ವಾಲ್‌ನ ಮುಖಾಂತರ ಸಂಚಾರ ದಟ್ಟಣೆಯನ್ನು ನಿವಾರಿಸುವ ನಿಟ್ಟಿನಲ್ಲಿ ತೆಗೆದುಕೊಂಡ ಮೊದಲ ಹೆಜ್ಜೆ. 26 ಕಾರಿಡಾರ್‌ಗಳಲ್ಲಿ ಎರಡು ಪಾಳಿಯಲ್ಲಿ

ನಿತ್ಯ ಕ್ಯಾಮರಾ ವೀಕ್ಷಿಸಿ ಜಂಕ್ಷನ್‌ಗಳಲ್ಲಿನ ಸಂಚಾರದ ದಟ್ಟಣೆಯನ್ನು ಪರಿಶೀಲಿಸಿ, ಸಿಗ್ನಲ್‌ಲೈಟ್‌ನ ಸಮಯವನ್ನು ಟಿ.ಎಂ.ಸಿ.ಯಿಂದಲೇ ಬದಲಾವಣೆ ಮಾಡುವ ಮೂಲಕ ಸಂಚಾರದ ಒತ್ತಡವನ್ನು ಕಡಿಮೆ ಮಾಡಿ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಬೆಂಗಳೂರು ನಗರ ಸಂಚಾರ ವಿಭಾಗದ ಪೊಲೀಸ್ ವೆಬ್‌ಸೈಟ್‌ಅನ್ನು ಪ್ರತಿನಿತ್ಯ ಸಮಗ್ರ ಮಾಹಿತಿಗಳೊಂದಿಗೆ ಇಲ್ಲಿಯೇ ಅಪ್‌ಡೇಟ್ ಮಾಡಲಾಗುತ್ತಿರುತ್ತದೆ ಹಾಗೂ ನಗರದಲ್ಲಿ ಅಳವಡಿಸಲಾಗಿರುವ ಸಿಗ್ನಲ್‌ಲೈಟ್, ವಿ.ಎಂ.ಎಸ್, ಸರ್ವಿಲನ್ಸ್ ಕ್ಯಾಮರಾ ಇನ್ನಿತರೆ ತಾಂತ್ರಿಕ ಉಪಕರಣಗಳ ನಿಯಂತ್ರಣವನ್ನು ಮಾಡಬಹುದಲ್ಲದೆ ಸಂದರ್ಭಕ್ಕೆ ತಕ್ಕಂತೆ ಮಾರ್ಪಾಡುಗಳನ್ನು ಮಾಡುವ ತಂತ್ರಜ್ಞಾನವನ್ನು ಒಳಗೊಂಡಿರುತ್ತದೆ.

19. ಜಂಕ್ಷನ್‌ಗಳಲ್ಲಿ ಕಣ್ಗಾವಲು ಕ್ಯಾಮೆರಾಗಳನ್ನು ಹಾಗೂ ನಿಯಮ ಜಾರಿ ಕ್ಯಾಮೆರಾಗಳನ್ನು ಅಳವಡಿಸಿದ್ದು ಜಂಕ್ಷನ್‌ಗಳಲ್ಲಿ ಜರುಗುವ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳನ್ನು ಸೆರೆಹಿಡಿದು ಮೋಟಾರು ವಾಹನ ಕಾಯ್ದೆ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿ ಕ್ರಮಕೈಗೊಳ್ಳಲಾಗುತ್ತಿದೆ.

20. ಬೆಂಗಳೂರು ನಗರದ ಥಣಿಸಂದ್ರದಲ್ಲಿರುವ ಸಂಚಾರ ತರಬೇತಿ ಮತ್ತು ರಸ್ತೆ ಸುರಕ್ಷತಾ ಸಂಸ್ಥೆಯಲ್ಲಿ ಸಹ ವೃತ್ತಿಪರ ಚಾಲಕರುಗಳಿಗೆ ಹಾಗೂ ಶಾಲಾ ವಾಹನಗಳ ಚಾಲಕರಿಗೆ ವಿಶೇಷವಾದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ತನ್ಮೂಲಕ ಅರಿವು ಮೂಡಿಸುವ ಉದ್ದೇಶವನ್ನು ಸಫಲಗೊಳಿಸುತ್ತಾ ಸಂಚಾರ ತರಬೇತಿ ಮತ್ತು ರಸ್ತೆ ಸುರಕ್ಷತಾ ಸಂಸ್ಥೆಯಲ್ಲಿ ಸಂಚಾರ ವಿಭಾಗದ ಅಧಿಕಾರಿ/ಸಿಬ್ಬಂದಿಯವರನ್ನು ಒಳಗೊಂಡಂತೆ ವಿವಿಧ ಚಾಲಕರುಗಳಿಗೆ ಹಾಗೂ ರಸ್ತೆ ಬಳಕೆದಾರರುಗಳಿಗೆ ತರಬೇತಿಯನ್ನು ನೀಡಲಾಗುತ್ತಿರುತ್ತದೆ.

21. ಬೆಂಗಳೂರು ನಗರ ಸಂಚಾರ ವಿಭಾಗವು ಸಾಮಾಜಿಕ ಜಾಲ ತಾಣಗಳಾದ ಫೇಸ್‌ಬುಕ್ ಮತ್ತು ಟ್ವಿಟರ್‌ಗಳ ಮೂಲಕ ಸಂಚಾರ ನಿಯಮಗಳ ಪಾಲನೆ ಹಾಗೂ ರಸ್ತೆ ಸುರಕ್ಷತೆಯ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.

22. ಸಾಮಾಜಿಕ ಜಾಲತಾಣಗಳ ಮುಖೇನ ಸಾರ್ವಜನಿಕರಿಗೆ ಅರಿವು ಮೂಡಿಸುವ ಸಂದೇಶಗಳ ರವಾನೆ.

| Social Media | Address | Followers |
|---|---|---|
| **Face Book** | **bengalurutrafficpolice** | 6,40,300 |
| **Twitter** | **@blrcitytraffic** | 6,40,300 |
| **WEB** | **www.bangaloretrafficpolice.gov.in** | |
| **What's APP** | **9480801800** | |
| **Traffic Control Room: 080-22943131 & 080-22943030** | | |
| **Police Help Line: Dial – 100** | | |

23. ಸಂಚಾರ ನಿರ್ವಹಣಾ ಕೇಂದ್ರದಲ್ಲಿ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಬೆಂಗಳೂರ ನಗರ ಸಂಚಾರ ನಿರ್ವಹಣೆಯನ್ನು ಮಾಡುತ್ತಿದ್ದು, ಈ ಬಗ್ಗೆ ಶಾಲಾ ಮಕ್ಕಳಿಗೆ ಹಾಗೂ ಇತರೆ ಇಲಾಖೆಯ ಸಿಬ್ಬಂದಿಗಳಿಗೆ ಟಿ.ಎಂ.ಸಿ. ಕಛೇರಿಯ ವೀಕ್ಷಣೆಗೆ ಅವಕಾಶವನ್ನು ಕಲ್ಪಿಸಲಾಗುತ್ತಿರುತ್ತದೆ.

***